# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

***ಎಸ್‌ಸಿ.*** **257/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ವಿಜಯ್ ಶಂಕರ್ | | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ/ಗಂಡನ ಹೆಸರು** | ಃ ಶ್ರೀ ಮಹದೇವಪ್ಪ | | **06.12.2024** |
| **ವಯಸ್ಸು** | ಃ 35 ವರ್ಷ | | |
| **ವೃತ್ತಿ** | ಃ ಟಿಂಬರ್ ಮರ್ಚೆಂಟ್ | **ಪ್ರಾ.ಸಾ.** | ಃ **05** |
| **ವಾಸಸ್ಥಳ** | ಃ ವಿದ್ಯಾರಣ್ಯಪುರಂ | **ಚಾ.ಸಾ.** | ಃ **10** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ–*1* ನವೀನ್ ಕುಮಾರ್ ಇವರ ಪರಿಚಯ ಇದೆ. ಚಾಸಾ–*2* ಮತ್ತು *3* ರವರ ಪರಿಚಯ ಇಲ್ಲ. ಕೋರ್ಟ್ ಮುಂದೆ ಇರುವ ಆರೋಪಿತರ ಪರಿಚಯ ಇಲ್ಲ. ಆರೋಪಿತರು ನವೀನ್ ಕುಮಾರ್ ಗೆ ಹೊಡೆದಿದ್ದನ್ನು ನಾನು ನೋಡಿಲ್ಲ ಮತ್ತು ಆ ಬಗ್ಗೆ ಹೇಳಿಕೆ ಕೊಟ್ಟಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*04.10.2020* ರಂದು ರಾತ್ರಿ *12.30* ಗಂಟೆಗೆ ನಾನು ನನ್ನ ತಂದೆಗೆ ಔಷಧಿ ತರಲು ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿ ವಾಪಸ್ಸು ಮನೆಗೆ ಹೊಗುತ್ತಿರುವಾಗ ಜೆ.ಎಸ್.ಎಸ್ ಆಸ್ಪತ್ರೆ ಗೇಟ್ ಮುಂಭಾಗ ಎಂ.ಜಿ ರಸ್ತೆಯ ಹಂಪ್ಸ್ ಬಳಿ ಇಬ್ಬರು ವ್ಯಕ್ತಿಗಳು ತರಕಾರಿ ಮಾರುಕಟ್ಟೆ ಕಡೆಯಿಂದ ಬರುತ್ತಿದ್ದ ಕಾರನ್ನು ಅಡ್ಡಗಟ್ಟಿ ನಿಲ್ಲಿಸಿ ಆ ಪೈಕಿ ಒಬ್ಬ ವ್ಯಕ್ತಿ ಕಾಡು ಡ್ರೈವ್ ಮಾಡುತ್ತಿದ್ದ ವ್ಯಕ್ತಿಗೆ ಕೈಯಿಂದ ಹೊಡೆದಿದ್ದ ಎಂದರೆ

ಸರಿಯಲ್ಲ. ಆ ಕಾಲಕ್ಕೆ ಕಾರಿನಲ್ಲಿದ್ದ ವ್ಯಕ್ತಿಗಳು ಮತ್ತು ಕಾರ್ ಡ್ರೈವ್ ಮಾಡುತ್ತಿದ್ದ ಕೆಳಗೆ ಇಳಿದಾಗ ಅವರು ನನ್ನ ಬಾಲ್ಯ ಸ್ನೇಹಿತರಾದ ನವೀನ್ ಕುಮಾರ್, ಪವನ್ ಕುಮಾರ್ ಮತ್ತು ರಮೇಶ್ ಕುಮಾರ್ ಎಂದು ಗೊತ್ತಾಗಿ ನಾನು ಅಲ್ಲಿಗೆ ಹೋದಾಗ ನವೀನ್ ಕುಮಾರ್, ಪವನ್ ಕುಮಾರ್ ಯಾವ ಕಾರಣಕ್ಕೆ ರಮೇಶನಿಗೆ ಹೊಡೆದಿರಿ ಎಂದು ಕೇಳಿದಾಗ ಕಾರ್ ಅಡ್ಡ ಗಟ್ಟಿದ ವ್ಯಕ್ತಿಗಳು ನಿಮಗೆ ಕಾರು ಸಿಕ್ಕರೆ ಮನುಷ್ಯರೇ ಕಾಣುವುದಿಲ್ಲ ಎಂದು ಆ ಪೈಕಿ ಒಬ್ಬನು ರೇಜರ್ ಅನ್ನು ತೆಗೆದುಕೊಂಡು ನವೀನ್ ಕುಮಾರ್ ಗೆ ಕುತ್ತಿಗೆಗೆ ಹೊಡೆದಿದ್ದ ಎಂದರೆ ಸರಿಯಲ್ಲ. ಆಗ ನವೀನ್ ಕುಮಾರ್ ತಪ್ಪಿಸಿಕೊಂಡಾಗ ನಿನ್ನನ್ನು ಮುಗಿಸದೇ ಬಿಡುವುದಿಲ್ಲ ಎಂದು ರೇಜರ್ ನಿಂದ ಮುಖಕ್ಕೆ ಹೊಡೆದಾಗ ಎಡ ಕಣ್ಣಿನ ಹತ್ತಿರ, ಎಡ ಭಾಗದ ತುಟಿ ಗಾಯವಾಗಿತ್ತು ಎಂದರೆ ಸರಿಯಲ್ಲ. ಇನ್ನೊಬ್ಬ ವ್ಯಕ್ತಿ ಆ ಮೂವರಿಗೂ ಕೈಯಿಂದ ಹೊಡೆದಿದ್ದ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು, ಕುಶಾಲ್ ಕಶ್ಯಪ್ ಮತ್ತು ಇತರರು ಜಗಳ ಬಿಡಿಸಿದ್ದೆವು ಎಂದರೆ ಸರಿಯಲ್ಲ. ಈ ಬಗ್ಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*4* ಎಂದು ಗುರುತಿಸಿದೆ. ಕೋರ್ಟ್ ಮುಂದೆ ಇರುವ ಆರೋಪಿತರೇ ಆ ದಿನ ಪವನ್ ಕುಮಾರ್ ಮತ್ತು ಇತರರಿಗೆ ಹಲ್ಲೆ ಮಾಡಿದ ವ್ಯಕ್ತಿಗಳು ಇರುತ್ತಾರೆ ಎಂದರೆ ಸರಿಯಲ್ಲ. ಈಗ ನಾನು ಆರೋಪಿತರ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ**

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು